ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ



## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ದೀಪಾವಳಿಗೆ ಪಟಾಕಿಬಿಡಿ

ನಮ್ಮ ದೇಶ ಹಳ್ಳಿಗಳಿಂದ ಕೂಡಿದ ಸುಂದರ ಮತ್ತು ಸಂಪ್ರದಾಯಸ್ಥ ದೇಶ. ಕೃಷಿಯೇ ಪ್ರಧಾನವಾಗಿದ್ದು, ರೈತರೇ ದೇಶದ ಬೆನ್ನೆಲುಬಾಗಿದ್ದಾರೆ. ದೇಶದ ಮುಕ್ಕಾಲು ಜನರು ವ್ಯವಸಾಯವನ್ನು ಅವಲಂಬಿಸಿದ್ದು, ಇವರು ಬೆಳೆದ ಬೆಳೆಯನ್ನೇ



ದೇಶದ ಜನತೆಗೆ ಆಹಾರ ಒದಗಿಸುತ್ತಿರುವುದು. ಆದರೆ ಈ ಬಾರಿ ಸಮಯಕ್ಕೆ ಸರಿಯಾಗಿ ಮಳೆಯಾಗದ ಕಾರಣ, ಬೆಳೆ ಬಾರದೆ ನಮ್ಮ ರೈತರು ಕಂಗಾಲಾಗಿದ್ದಾರೆ. ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಜೀವನ ನಡೆಸುವುದು ಕಷ್ಟದಾಯಕವಾಗಿದೆ. ಇದರ ನಡುವೆಯೇ ಹಿಂದೂಗಳ ಹಬ್ಬವಾದ ದೀಪಾವಳಿ ಬಂದಿದ್ದು, ಆಚರಿಸದೇ ಇರಲು ಆಗದು. ಅದಕ್ಕಾಗಿ ಇನ್ನು ಮುಂದೆ ಎಣ್ಣೆಯ ದೀಪ ಹಚ್ಚುವ ಮೂಲಕ ಸರಳವಾಗಿ ಹಬ್ಬ ಆಚರಿಸೋಣ. ವಿಪರೀತ ಹಣ ಖರ್ಚು ಮಾಡಿ ಪಟಾಕಿ ಸಿಡಿಸುವುದನ್ನು ತ್ಯಜಿಸೋಣ. ಇದರಿಂದ ದುಂದು ವೆಚ್ಚವಾಗುವುದರ ಜತೆಗೆ ಶಬ್ದಮಾಲಿನ್ಯ, ವಾಯುಮಾಲಿನ್ಯ, ಪ್ರಾಣಿಪಕ್ಷಿಗಳಿಗೆ ತೊಂದರೆಯಾಗುತ್ತದೆ. ಈ ದೀಪಾವಳಿಗೆ ಪಟಾಕಿಬಿಡಿ, ಬಡಮಕ್ಕಳಿಗೆ ಒಪ್ಪೊತ್ತಿನ ಊಟಕೊಡಿ ಮತ್ತು ಮಾಲಿನ್ಯವನ್ನು ತಡೆಗಟ್ಟಿ ಎನ್ನುವ ಸಂಕಲ್ಪವನ್ನು ಕೈಗೊಳ್ಳಬೇಕಾಗಿದೆ. ಹಬ್ಬದ ದಿನದಂದು ಬಡಮಕ್ಕಳಿಗೆ, ಅನಾಥಾಶ್ರಮ, ವೃದ್ಧಾಶ್ರಮ, ಅಂಗವಿಕಲರನ್ನು ಬೇಟಿ ಮಾಡಿ, ಪಟಾಕಿಗೆ ಖರ್ಚು ಮಾಡುವ ಹಣವನ್ನೇ ಇವರ ಊಟೋಪಚಾರಕ್ಕೆ ನೀಡಿದರೆ, ಅವರಿಗೂ ಸಂತೋಷವಾಗುತ್ತದೆ. ಮತ್ತು ಕೊಡುಗೈದಾನಿಗಳಿಗೂ ಪುಣ್ಯಪ್ರಾಪ್ತಿಯಾಗುತ್ತದೆ.

**ವಿಠಲ ಆರ್. ಯಂಕಂಚಿ** ಬಮ್ಮನಜೋಗಿ

### ಶಿಕ್ಷಕರಿಗೆ ವರ್ಗಾವಣೆ ಕೊಡಿ

'ಒಂದು ದೇಶದ ಭವಿಷ್ಯ, ಶಾಲಾ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ' ಎಂದು ಕೊಠಾರಿ ಆಯೋಗ ಹೇಳುತ್ತದೆ.

ಈ ಮಾತು ಅಕ್ಷರಶಃ ನಿಜ. ಇದು ಸಾರ್ಥಕವಾಗಬೇಕಾದರೆ, ಶಾಲೆಗೆ ಕೊಡುವ ಭೌತಿಕ ಸಂಪನ್ಮೂಲದ ಜತೆಗೆ ಮಾನವ ಸಂಪನ್ಮೂಲ ಅರ್ಥಾತ್ ಶಿಕ್ಷಕರು ಬಹುಮುಖ್ಯ. ಏನೇ ಸೌಲಭ್ಯವಿದ್ದರೂ, ಶಿಕ್ಷಕರ ಮನಸ್ಥಿತಿ ಸರಿಯಿಲ್ಲದಿದ್ದರೆ, ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ. ಅಲ್ಲಿಗೆ ವ್ಯಯಿಸಿದ ಹಣ ವ್ಯರ್ಥ! ಇಂದು ಶಿಕ್ಷಕರಿಗೆ ಸಾಕಷ್ಟು ವೇತನವಿದೆ. ಆದರೆ ಕಳೆದ ಮೂರು ವರ್ಷಗಳಿಂದ ವರ್ಗಾವಣೆ ಮಾತ್ರ ಮರೀಚಿಕೆಯಾಗಿದೆ. ಶಿಕ್ಷಕರು ವರ್ಗಾವಣೆಗಾಗಿ ಜಾತಕ ಪಕ್ಷಿಯಂತೆ ಕಾದು ಕಾದು ಬೇಸತ್ತಿದ್ದಾರೆ. ಇದರಿಂದ ಮಾನಸಿಕ ಕ್ಷೋಭೆಗೆ ಒಳಗಾದ ಕೆಲ ಶಿಕ್ಷಕರಿಂದ ಪಾಠ ಪ್ರವಚದ ಮೇಲೆ ದುಷ್ಪರಿಣಾಮ ಬೀರಿದೆ.

ಈ ರೀತಿ ನೊಂದವರಿಗೆ ಆಶಾಕಿರಣವೆಂಬಂತೆ ಪ್ರಸಕ್ತ ವರ್ಷದಲ್ಲಿ ವರ್ಗಾವಣೆಗಾಗಿ ಕೌನ್ಸೆಲಿಂಗ್ ಪ್ರಕ್ರಿಯೆ ಪ್ರಾರಂಭವಾಗಿತ್ತು. ಆದರೆ ಕೆಲ ಜಿಲ್ಲೆಗಳಲ್ಲಿ ಕೆಲ ಶಿಕ್ಷಕರು ಮಾತ್ರ 'ಸಿ' ವಲಯದಿಂದ 'ಸಿ' ವಲಯಕ್ಕೆ ವರ್ಗಾವಣೆ ಕೊಡಬೇಕೆಂದು ಪಟ್ಟು ಹಿಡಿದು, ವರ್ಗಾವಣೆ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ನಿಯಮಾನುಸಾರವಾಗಿ ಕೌನ್ಸೆಲಿಂಗ್ ನಡೆದದ್ದು ಮಾತ್ರ ಶ್ಲಾಘನೀಯ. ವರ್ಗಾವಣೆ ವಿರೋಧಿಸಿ ಹೋರಾಡಿದ ಶಿಕ್ಷಕರೇ, ನಿಮ್ಮ ಹೋರಾಟವೇನೋ ಸರಿ. ಆದರೆ ವರ್ಗಾವಣೆ ಮಾರ್ಗದರ್ಶಿ ಸೂತ್ರಗಳನ್ನು ಬಿಟ್ಟಾಗ ನೀವು ಅಂದೇಕೆ ಸುಮ್ಮನಿದ್ದಿರಿ? ವರ್ಗಾವಣೆಯ ಅಂತಿಮ ಪಟ್ಟಿಯನ್ನು ಬಿಡುವ ಮುನ್ನ ಆಕ್ಷೇಪಣೆಗೆ ಅವಕಾಶ ಕೊಟ್ಟಾಗ ಅಂದೇ ಆಕ್ಷೇಪಣೆ ಸಲ್ಲಿಸಬಹುದಿತ್ತಲ್ಲ? ಆಗ ಸುಮ್ಮನಿದ್ದು, ಈಗ ವಿರೋಧಿಸುವುದು ಎಷ್ಟು ಸರಿ? ಈ ಹೋರಾಟದಿಂದಾಗಿ, ಮುಖ್ಯಮಂತ್ರಿಗಳು ವರ್ಗಾವಣೆ ಪ್ರಕ್ರಿಯೆಯನ್ನು ರದ್ದುಗೊಳಿಸುವುದಾಗಿ ಹೇಳಿಕೆ ನೀಡಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳೇ, ದಯಮಾಡಿ ಪ್ರಸಕ್ತ ವರ್ಷದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಂದುವರಿಸಲು ಅನುಮತಿ ಕೊಡಿ. ಮಕ್ಕಳ ಪಾಠಪ್ರವಚನಕ್ಕೆ ಅಡ್ಡಿಯಾಗುತ್ತದೆ ಎನ್ನುವುದಾದರೆ ವರ್ಗಾವಣೆಗೊಂಡ ಶಿಕ್ಷಕರನ್ನು ಶೈಕ್ಷಣಿಕ ವರ್ಷಾಂತ್ಯಕ್ಕೆ ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಬಿಡುಗಡೆಗೊಳಿಸಿ. ವರ್ಗಾವಣೆ ಸಮಸ್ಯೆಯನ್ನು ಬಗೆಹರಿಸಿ.

**ವರ್ಗಾವಣಾ ಆಕಾಂಕ್ಷಿ** ಶಿಕ್ಷಕರು

## ಭಟ್ಟರ್ ಸ್ನ್ಯಾಕ್

- **ಶಿವನಂಜಯ್ಯ ಕೆ. ಕಡಕೋಳ, ಬೆಳಗಾವಿ**
ಯಾರಾದರೂ ಪ್ರಾಯೋಜಕರಿದ್ದರೆ, ಮದುವೆ ಆಗಬಹುದಾ?
**– ವರದಕ್ಷಿಣೆ ಕೊಡುವ ಮಾವನಿಗಿಂತ ದೊಡ್ಡ ಪ್ರಾಯೋಜಕರು ಯಾರಿದ್ದಾರೆ?**

- **ವಸಂತ ರಾವ್, ಹೈದರಾಬಾದ್**
ಹಾಲಿನ ದರ ಜಾಸ್ತಿ ಆದ್ರೆ ಗತಿಯೇನು?
**– ಬಡ್ಕೋಬೇಕು. ಆಲ್ಕೋಹಾಲ್ ದರ ಜಾಸ್ತಿಯಾದ್ರೆ ಒಬ್ರಾದರೂ ಕಂಪ್ಲೇಂಟ್ ಮಾಡ್ತಾರಾ?!**

- **ಸುಬ್ರಮಣ್ಯ ಎಂ.ವಿ., ಪುತ್ತೂರು**
ಭಾರತೀಯರು ಹವಾಮಾನವನ್ನು ಗಂಭೀರವಾಗಿ ಸ್ವೀಕರಿಸುವುದಿಲ್ಲ, ಏಕೆ?
**– ಅವರಿಗೆ ಮಾನವೊಂದೇ ಮುಖ್ಯ!**

- **ಸಂತೋಷಕುಮಾರ ಕೆರೆಕಟ್ಟೆ, ಕಡೂರು**
'ಮುತ್ತು' ಕೇಳಿ ಪಡೆಯಬೇಕೋ, ಕೊಟ್ಟರೆ ಸ್ವೀಕರಿಸಬೇಕೋ?
**– ಎಲ್ಲಿ ತನಕ ನೀನು 'ಚುಂಬನ' ಅಂತ ಹೇಳೋದಿಲ್ಲವೋ, ಅಲ್ಲಿ ತನಕ ಇಂಥ ಪ್ರಶ್ನೆಗಳನ್ನು ಕೇಳ್ತಾನೇ ಇರ್ತಿಯಾ!**

- **ಸರಸ್ವತಿ ಮಾಳಮಡ್ಡಿ, ಧಾರವಾಡ**
ಕರ್ನಾಟಕ ರಾಜಕಾರಣ ಸಪ್ಪೆ ಆಗಿದೆಯಲ್ಲ, ಯಾಕೆ?
**– ಬಡ್ಕೊಂಡೆ, ಆ ರೇಣುಕಾಚಾರ್ಯನನ್ನು ಕರ್ಕೊಂಡು ಬನ್ರೋ ಅಂತ, ಯಾರೂ ಕೇಳ್ತಾ ಇಲ್ಲ!**

- **ರಾಜಾರಾಮ ಬನಹಟ್ಟಿ, ಹೊಸಪೇಟೆ**
ಸೆಮಿಸ್ಟರ್ ಸಿಸ್ಟಮ್‌ನಿಂದ ಲಾಭವೇನು?
**– ಲಾಭವೇನೆಂಬುದು ಗೊತ್ತಿಲ್ಲ, ಆದರೆ ವರ್ಷದಲ್ಲಿ ಎರಡು ಸಲ ಮಾನ, ಮರ್ಯಾದೆ ಹೋಗೋದು ಗೊತ್ತಲ್ಲ!**

- **ಕೆ.ಜಿ. ರೆಡ್ಡಿ, ಗೋವಿಂದಪುರ**
ಜೀವನದಲ್ಲಿ ಹಣ ಮಾಡೋದು ತಪ್ಪಾ?
**– ಮಾಡದೇ ಇರೋದು ಮಾತ್ರ ಘೋರ ತಪ್ಪು!**

- **ಸುಬ್ರಾಯ ಹೆಗಡೆ, ಶಿರಸಿ**
ವಾಟ್ಸಪ್ ಇಲ್ಲದಿದ್ದರೆ ಏನಾಗುತ್ತಿತ್ತು ಭಟ್ರೇ?
**– ಇನ್ನು ಚಿನ್ನಿ ದಾಂಡು ಆಡ್ತಾನೇ ಇರ್ತಿದ್ದೆ ನೀನು!**

- **ಶಶಿಕಿರಣ ಪಾಟೀಲ, ಹುಬ್ಬಳ್ಳಿ**
ಕೆಲವರು ಮೊಸರಿನಲ್ಲಿ ಕಲ್ಲು ಹುಡುಕುತ್ತಾರಲ್ಲ, ಸಾರ್?
**– ಅದೇ ವಾಸಿ, ಇನ್ನು ಕೆಲವರು ಕಲ್ಲಿನಲ್ಲಿ ಮೊಸರು ಹುಡುಕುತ್ತಾರಪ್ಪ!**

- **ವೀರೇಶ ಮೆಣಸಿನಕಾಯಿ, ಶಿರಾಳಕೊಪ್ಪ**
ರೈತರೆಲ್ಲ ತಮ್ಮ ಜಮೀನು ಮಾರಿ ಆರಾಮಾಗಿರಬಹುದಲ್ವಾ?
**– ನಿಜ, ಆಗ ಜನರೂ ಮಣ್ಣು ತಿಂದುಕೊಂಡು ಆರಾಮಾಗಿರ್ತಾರೆ!**

# ಹತ್ಯೆಕೋರರ ಗುಂಡಿಗೆ ಬಲಿಯಾಗಿದ್ದು ಅವನಿ ಹೌದೇ?

**ವಿವಾದ**

**ಪವನ್ ವಸಿಷ್ಠ**

editoped@vishwavani.news

T1 ಅವನಿಯನ್ನು ಗುಂಡಿಕ್ಕಿ ಕೊಂದಾಯಿತು ಎಂದು ಮಹಾರಾಷ್ಟ್ರ ಸರಕಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಅಂತೂ ಅಂತಿಮವಾಗಿ ಹಂತಕರ ಕೈಯೇ ಮೇಲಾಯಿತು. ಕಾನೂನಿಗೆ ವಿರುದ್ಧವಾಗಿ ರಾತ್ರಿ ಸಮಯದಲ್ಲಿ ಹುಲಿ ಬಲಿಯಾಯಿತು. ಅದು ಅವನಿಯೇ ಸತ್ತಿರುವುದು ಎಂದು ಖಚಿತ ಮಾಹಿತಿ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರವಷ್ಟೇ ತಿಳಿಯುತ್ತದೆ. ಮುಗ್ಧ ಅವನಿಗೆ ಹಂತಕ ಪಟ್ಟ ನೀಡಿ, ನಿಜವಾದ ಹಂತಕರನ್ನು ರಕ್ಷಕ ಎಂದು ಬಿಂಬಿಸಲು ಹೊರಟಿರುವ ಪ್ರಜಾಪ್ರಭುತ್ವದ ನಾಲ್ಕು ಅಂಗಗಳು ದಿವ್ಯಾಂಗವಾಗಿವೆಯೇನೋ ಎಂಬ ಅನುಮಾನ ಈಗ ದಟ್ಟವಾಗಿ ಕಾಡತೊಡಗಿದೆ.

ವನ್ಯಜೀವಿಗಳ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ ಎಂದು ಭಾರತೀಯ ಸಂವಿಧಾನದಲ್ಲಿ ಹೇಳಲಾಗಿದೆ. ಸಂವಿಧಾನದ ಆಶಯಗಳ ವಿರುದ್ಧ ಇಂದು ವ್ಯವಸ್ಥಿತವಾಗಿ ಒಂದು ಹುಲಿಯನ್ನು ಕೊಲ್ಲಲಾಗಿದೆ. ಗನ್ ಕೈಯಲ್ಲಿ ಇದ್ದ ಮಾತ್ರಕ್ಕೆ ಗುಂಡು ಹಾರಿಸುವುದೇ ಚಟ ಮಾಡಿಕೊಂಡ ಹಂತಕರಿಂದ ಜೀವ ಉಳಿಸುವ ಯೋಚನೆ ಎಲ್ಲಾದರು ಬಂದೀತೆ? ಮನುಷ್ಯ ರೂಪದ ರಾಕ್ಷಸರ ಆಸೆಗೆ ಕೊನೆಯೇ ಇಲ್ಲವೇ? ಎಲ್ಲರಂತೆ ತಾನು ಬದುಕಬೇಕೆಂಬ ಆಸೆ ಇಟ್ಟುಕೊಂಡು ಬಂದ ಅವನಿಗೆ ನಾವು ಕೊಟ್ಟ ಗೌರವ, ಮನುಷ್ಯ ಸಂಕುಲವನ್ನೇ ಅಸಹ್ಯ ಪಡುವಂತೆ ಮಾಡಿದೆ.

ಸದ್ಯ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ 2 ಮರಿಗಳನ್ನು ಹುಡುಕಿ ಅದಕ್ಕೆ ಅರವಳಿಕೆ ಮದ್ದು ನೀಡಿ ಛಿತ್ತಿಛಿ ಇಲ್ಲಿಶ್ತಿಛಿ ಗೆ ಕಳುಹಿಸಬೇಕೆಂದು ಆದೇಶಿಸಿದೆ. ಆದರೆ ಮಹಾರಾಷ್ಟ್ರ ಸರಕಾರ ಇನ್ನೂ ಅವನಿಯನ್ನ ಕೊಂದ ಸಂತೋಷದ ಗುಂಗಿನಿಂದ ಹೊರಬಂದಂತೆ ಕಾಣುತ್ತಿಲ್ಲ. ಕಾರಣ, ಈವರೆಗೂ ಮರಿಯ ಸುಳಿವೇ ಅಧಿಕಾರಿಗಳಿಗೆ ದೊರೆಯದಿರುವುದು. ಒಂದು ವೇಳೆ ಮರಿ ಜೀವಂತವಾಗಿ, ಶೀಘ್ರವಾಗಿ ಸಿಗದೇ ಹೋದಲ್ಲಿ ಅದು ಹಸಿವು ತಾಳಲಾರದೆ ಪ್ರಾಣ ಕಳೆದುಕೊಳ್ಳುವ ಲಕ್ಷಣಗಳು ಹೆಚ್ಚಾಗಿವೆ. ಅಲ್ಲಿಗೆ ಹುಲಿ ಸಾವಿನ ಸಂಖ್ಯೆ ಎರಡು ಅಥವಾ ಮೂರಕ್ಕೆ ಏರಲಿದೆ.

ಕಾಡಿನ ಹುಲಿ ಅಬ್ಬಬ್ಬಾ ಅಂದರೆ 10–12 ವರ್ಷ ಬದುಕಬಹುದಷ್ಟೆ. ಒಂದು ರಾಷ್ಟ್ರೀಯ ಪ್ರಾಣಿಯನ್ನು 12 ವರ್ಷಗಳ ಕಾಲ ರಕ್ಷಿಸಲಾಗದ ಅಸಹಾಯಕತೆ ನಮ್ಮ ದೇಶಕ್ಕೆ ಎದುರಾಗಿದೆ ಎಂದರೆ ನಿಜಕ್ಕೂ ಶೋಚನೀಯ. ಇದನ್ನು ಗಮನಿಸಿದರೆ ಹುಲಿ ನೋಡಿ ಮನುಷ್ಯರು ಭಯ ಪಡುವ ಬದಲಿಗೆ ರಾಷ್ಟ್ರೀಯ ಪ್ರಾಣಿಯೇ ಇಲ್ಲದ ರಾಷ್ಟ್ರ ಆಗಿಬಿಡಬಹುದೇನೊ ಎಂಬ ಭಯವೇ ಇಂದು ಹೆಚ್ಚಾಗಿದೆ.

ಅವನಿ ಸಾವಿನ ಸುತ್ತ ಕಾಡುತ್ತಿದೆ ಅನುಮಾನದ ಹುತ್ತ

ಸುಪ್ರೀಂ ತನ್ನ ಆದೇಶದಲ್ಲಿ The effort to tranquilize and capture T&1 tigress will be continued and if unsuccessful, it shall be eliminated by shooting to avoid any further loss of human life ಎಂದು ಆದೇಶಿಸಿತ್ತು. ಅಂದರೆ ಮೊದಲು T1ನ್ನು ಅರೆವಳಿಕೆ ಮದ್ದು ನೀಡಿ ಹಿಡಿಯುವ ಪ್ರಯತ್ನ ಮುಂದುವರಿಸಿ. ಅದಾಗದಿದ್ದಲ್ಲಿ ಮುಂದಾಗಬಹುದಾದ ನರಬಲಿಯಂತಹ ಅನಾಹುತ ತಪ್ಪಿಸಲು ಅಂತಿಮ ಆಯ್ಕೆಯಾಗಿ ಗುಂಡು ಹಾರಿಸಿ ಎಂದು ಆದೇಶಿಸಿತ್ತು. ಆದರೆ ಇಲ್ಲಿ ಆಗಿದ್ದೇ ಬೇರೆ ಎಂದು ಕರ್ನಾಟಕ ಮೂಲದ ಪಶುವೈದ್ಯ ಮತ್ತು ವನ್ಯಜೀವಿ ತಜ್ಞರಾಗಿರುವ ಡಾ. ಪ್ರಯಾಗ್ ಆರೋಪಿಸಿದ್ದಾರೆ.

ಆರೋಪ–1

ಹುಲಿ ಸತ್ತ ಫೋಟೊ ಗಮನಿಸಿದರೆ, ಮೊದಲು ಗುಂಡು ಹಾರಿಸಿ ನಂತರ ಸುಪ್ರೀಂ ಆದೇಶ ಜ್ಞಾಪಕಕ್ಕೆ ಬಂದಂತಾಗಿ ಅರೆವಳಿಕೆ ಮದ್ದನ್ನು ಗುಂಡಿಟ್ಟ ನಂತರ ಚುಚ್ಚಿದ್ದಾರೆಂದು ಮೇಲ್ನೋಟಕ್ಕೆ ಕಾಣುತ್ತಿದೆ. ಇದು ಮರಣೋತ್ತರ ವರದಿ ಯಲ್ಲೂ ಸಹ ಗುಂಡಿಟ್ಟ ನಂತರ ಡಾರ್ಟ್ ಮಾಡಿರುವುದಾಗಿ ಉಲ್ಲೇಖವಾಗಿರುವುದಾಗಿ ಮೂಲಗಳು ತಿಳಿಸಿವೆ. ಯಾವುದೇ ಜೀವಿಗಳಿಗೆ Dart ಮಾಡಿದಾಗ, ಗುರಿ ಇಟ್ಟ ಜಾಗಕ್ಕೆ ಗನ್ ನಿಂದ ಹೊರಹೋಗುವ ವಸ್ತು Perpendicular BX land ಆಗುತ್ತದೆ ಹೊರತು Parallel ಆಗಿ ಅಲ್ಲ. ಅವನಿ ವಿಚಾರದಲ್ಲಿ ಡಾರ್ಟ್ parallel ಆಗಿ ಇರುವುದು ಕಾಣಬಹುದು.

ಆರೋಪ–2

ಒಂದು ವೇಳೆ ಅರೆವಳಿಕೆ ಮದ್ದು (ಡಾರ್ಟ್) ಗನ್ ಮೂಲಕ ನೀಡಿದ್ದರೆ, ಯಾವುದೇ ಪ್ರಾಣಿ ಹಿಂತಿರುಗಿ ತಕ್ಷಣ ದಾಳಿ ಮಾಡುವುದು ಅಷ್ಟು ಸುಲಭವಲ್ಲ. ಅಲ್ಲದೆ ರಾತ್ರಿ ಸಮಯದಲ್ಲಿ ಈ operation ನಡೆದಿದ್ದು, ಪ್ರಾಣಿಗೂ ಸಹ ದಾಳಿಕೋರರನ್ನ ಹುಡುಕಲು ಸಮಯ ಬೇಕಾಗುತ್ತದೆ. ವಾಸ್ತವವಾಗಿ ಸೂರ್ಯಾಸ್ತ ಮತ್ತು ಸೂರ್ಯೋದಯದ ಸಮಯದಲ್ಲಿ ಡಾರ್ಟ್ ಮಾಡುವುದು ನಿಷೇಧಿಸಲಾಗಿದೆ. ಆದರೆ ಅವನಿ ವಿಚಾರದಲ್ಲಿ ಈ ಎಲ್ಲ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಡಾರ್ಟ್ ಮಾಡಬೇಕಾದರೆ ಯಾರು 10–20 ಅಡಿ ಅಂತರದಿಂದ ಡಾರ್ಟ್ ಮಾಡುವ ಸಾಹಸಕ್ಕೆ ಕೈ ಹಾಕುವುದಿಲ್ಲ, ಕೆಲವು ಮೀಟರ್ ಅಂತರದಲ್ಲಿ ನಿಂತು ಡಾರ್ಟ್ ಮಾಡಿರುತ್ತಾರೆ. ಡಾರ್ಟ್ ಮಾಡಲು 30–40 ಮೀ safe distance ಆಗಿರುತ್ತದೆ. ಇಲ್ಲಿ 20 ಮೀ ಅಂತರದಿಂದ ಡಾರ್ಟ್ ಮಾಡಿರುವುದಾಗಿ ಹಂತಕರ ಗುಂಪಿನವರು ಮಾಹಿತಿ ನೀಡಿದ್ದಾರೆ. ಪ್ರಾಣಿಗಳು ತನಗೆ ಯಾವ ದಿಕ್ಕಿನಿಂದ ಅರವಳಿಕೆ ಹಾರಿಸಲಾಗಿದೆ ಎಂದು ಯೋಚಿಸಿ react ಮಾಡುವಷ್ಟರಲ್ಲಿ ಮದ್ದು ಕೆಲಸ ಮಾಡಲು ಶುರು ಮಾಡಿರುತ್ತದೆ.ಅಂದರೆ ಪ್ರಾಣಿ ದಾಳಿ ಮಾಡುವ ಹೊತ್ತಿಗೆ ಮೂರ್ಛೆ ಹೋಗಿರುತ್ತದೆ. ಅವನಿ ಪ್ರಕರಣದಲ್ಲಿ ಆಕೆಯನ್ನು ದಾಳಿ ಮಾಡಿದ ಸಮಯ, ಪ್ರದೇಶ, ವಾತಾವರಣ ಗಮನಿಸಿದರೆ, ಅವನಿ ಹಿಂತಿರುಗಿ ದಾಳಿ ಮಾಡಿರುವ ಅವಕಾಶ ಕಡಿಮೆಯೇ.

ಆರೋಪ–3

ಡಾರ್ಟ್ ಮಾಡಬೇಕಾದರೆ ನುರಿತ ಪಶು ವೈದ್ಯ ಜತೆಗಿರಬೇಕು. ಕಾರಣ ಡಾರ್ಟ್‌ಗೆ ಬಳಸುವ ಡ್ರಗ್ ಶೆಡ್ಯೂಲ್ ಎಚ್ ವಲಯಕ್ಕೆ ಸೇರಿದ್ದು. ಡಾರ್ಟ್ ಮಾಡುವ ಡ್ರಗ್‌ನ 'ರೇಪ್ ಡ್ರಗ್' ಎಂದೂ ಸಹ ಕರೆಯುತ್ತಾರೆ. ಶೆಡ್ಯೂಲ್ ಎಚ್ ಡ್ರಗ್ ಪರವಾನಗಿ ಪಡೆದ ಪಶುವೈದ್ಯರು ಮತ್ತು ಅವರ ಉಪಸ್ಥಿತಿಯಲ್ಲಿ ಮಾತ್ರ ಬಳಸಬೇಕು. ಡಾರ್ಟ್ ಮಾಡಿದ ನಂತರ ಪ್ರಾಣಿಯ ಆರೋಗ್ಯದಲ್ಲಿ ಏರುಪೇರಾಗಲಿದ್ದು ತಕ್ಷಣವೇ ಪಶುವೈದ್ಯರು ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಆದರೆ ಅವನಿ ವಿಚಾರದಲ್ಲಿ ಪರವಾನಗಿ ಇಲ್ಲದ ಮತ್ತು ಪಶುವೈದ್ಯರ ಅನುಪಸ್ಥಿತಿಯಲ್ಲಿ ಡಾರ್ಟ್ ಮಾಡಲಾಗಿದೆ ಎಂದು ಹೇಳಲಾಗಿದ್ದು, ಅದು ವೆಟರ್ನರಿ ಕೌನ್ಸಿಲ್ ಆಫ್ ಇಂಡಿಯಾದ ನಿಯಮ ಉಲ್ಲಂಘನೆ ಆಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA) ಪ್ರಕಾರ, ಹುಲಿಗೆ ಅರವಳಿಕೆ ಮದ್ದು ನೀಡಬೇಕಾದರೆ, ಈ ಇಲಾಖೆ ಮಟ್ಟದ ಅಧಿಕಾರಿ ಬಯೋಲಾಜಿಸ್ಟ್ ಮತ್ತು ಪಶುವೈದ್ಯರು ಇರಲೇಬೇಕು. ಅವನಿ ವಿಚಾರದಲ್ಲಿ ಈ ತ್ರಿಮೂರ್ತಿಗಳು ಇರಲಿಲ್ಲ. ಈ ಮೂವರು ಇಲ್ಲದೆ ಹುಲಿ ಹಿಡಿಯಲು ಹೋದರೆ, ಅದು ಅಕ್ರಮ ಹುಲಿ ಬೇಟೆ ಎಂದೇ ಪರಿಗಣಿಸಬೇಕಾಗುತ್ತದೆ ಎಂಬುದು ಗಮನಿಸಬೇಕು.

ಆರೋಪ–4



ಅವನಿಗೆ ಗುಂಡೇಟು ಬೀಳುವ ಮುನ್ನ ಅರೆವಳಿಕೆ ಮದ್ದು ನೀಡಿಲ್ಲ ಎಂದು ಪ್ರತ್ಯಕ್ಷದರ್ಶಿ ಫೋನ್ ಮೂಲಕ ಹೇಳಿಕೆ ನೀಡಿರುವುದು ಹಲವಾರು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಸದ್ಯ ಈ ಸಾಕ್ಷಿಯನ್ನು ಖರೀದಿಸುವ ಎಲ್ಲ ರೀತಿ ಪ್ರಯತ್ನಗಳು ನಡೆಯುತ್ತಿದೆ ಎಂದು ಹೇಳಲಾಗಿದೆ. ಸಾಕ್ಷಿ ಪ್ರತಿಕೂಲ ಹೇಳಿಕೆ ನೀಡದೆ ಹೋದಲ್ಲಿ ಅವನಿ ಕೊಂದ ಪಾಪಿಗಳು ಕಠಿಣ ಕಾನೂನು ಕ್ರಮ ಎದುರಿಸಬೇಕಾಗುತ್ತದೆ.

ಆರೋಪ– 5

ಎಲ್ಲಕ್ಕಿಂತ ಮಿಗಿಲಾಗಿ ಯಾವುದೇ ಹುಲಿ ನರಭಕ್ಷಕ ಎಂದು ಹೇಳಬೇಕಾದರೆ (NTCA) ತನ್ನ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವ ಅಂಶಗಳು ಪೂರೈಸಿರಬೇಕು. ಆದರೆ ಖ1 ವಿಚಾರದಲ್ಲಿ ಮಾರ್ಗಸೂಚಿಯಲ್ಲಿನ ಅಂಶಗಳು ಪೂರೈಸಿಲ್ಲ. ಹಾಗಿದ್ದರೂ ಸಹ ಆಕೆಗೆ ನರಭಕ್ಷಕಿ ಪಟ್ಟ ಕಟ್ಟಲಾಯಿತು.

ಇಂದು ಅವನಿಯನ್ನು ರಕ್ಷಿಸಲು ಇದ್ದ ಅಂತಿಮ ಹಾಗೂ ಏಕೈಕ ಅವಕಾಶವಾಗಿದ್ದ ಈ ಮಾರ್ಗಸೂಚಿಯು ಆಕೆಯನ್ನು ರಕ್ಷಿಸದೆ ಇರುವುದು ಎಂಥ ಕಟುಕರ ಕಣ್ಣಲ್ಲೂ ನೀರು ತರಿಸುತ್ತದೆ. ವಿಧಿವಿಜ್ಞಾನ ಪ್ರಯೋಗಾಲಯ ವರದಿಯಲ್ಲಿ ಅವನಿಯೇ ಸತ್ತಿರುವುದಾಗಿ ಒಂದು ವೇಳೆ ದೃಢಪಟ್ಟು, ನಂತರವೂ ನರಬಲಿ ಮುಂದುವರಿದರೆ ಮತ್ತೊಂದು ಹುಲಿಯನ್ನ ಬಲಿ ಹಾಕುವಂತೆ ಸರಕಾರಕ್ಕೆ ಒತ್ತಡ ಬರಲು ಆರಂಭವಾಗುವುದರಲ್ಲಿ ಅನುಮಾನವಿಲ್ಲ. ಒಂದು ವೇಳೆ ಹೀಗಾದರೆ Bad days for Indian Justice ಪಟ್ಟಿಯಲ್ಲಿ ಅವನಿಯನ್ನ ಕೊಲ್ಲಲು ಸುಪ್ರೀಂ ಆದೇಶ ನೀಡಿದ 2018ರ ಸೆ.6 ಸಹ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತದೆ. ಆ ಪ್ರಾಂತ್ಯದಲ್ಲಿ ಒಟ್ಟು 7 ಹುಲಿಗಳು ಇರುವುದಾಗಿ ಅಂದಾಜಿಸಲಾಗಿದೆ. ಉಳಿದ 6 ಹುಲಿ ರಕ್ಷಿಸಲು ತನ್ನ ಪ್ರಾಣ ಪಣಕ್ಕೆ ಇಟ್ಟ ವೀರ ಯೋಧೆ ಎಂಬ ಕೀರ್ತಿಗೆ ಅವನಿ ಪಾತ್ರಳಾಗುತ್ತಾಳೆ. ಒಂದು ವೇಳೆ ಯಾವುದೇ ನರಬಲಿ ಆಗದಿದ್ದರೂ ಸಹ ಆಕೆ ನಿರಪರಾಧಿ ಆಗಿಯೇ ಉಳಿಯುತ್ತಾಳೆ. ಕಾರಣ NTCA ಪ್ರಕಾರ ಅವನಿ ನರಭಕ್ಷಕಿ ಎಂದು ಇನ್ನು ದೃಢಪಟ್ಟಿಲ್ಲದೆ ಇರುವುದು.

ದೇಶದ ಮೂಲೆ ಮೂಲೆಯಿಂದ ಹಲವಾರು ಸಂಘಟನೆ ಮತ್ತು ಸಂಘ ಸಂಸ್ಥೆಗಳು ಅವನಿ ಸಾವಿನ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಪ್ರಕರಣ ಸಿಬಿಐಗೆ ವಹಿಸುವಂತೆ ರಾಜ್ಯ ಹಾಗು ಕೇಂದ್ರ ಸರಕಾರಕ್ಕೆ ಒತ್ತಡ ಹೇರುತ್ತಿದೆ. ಅವನಿ ಪ್ರಕರಣದಲ್ಲಿ ಕಾನೂನು ಪಾಲನೆ ಆಗದೆ ಇದ್ದು, ಆಕೆಯ ಮರಣೋತ್ತರ ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರ ಅವನಿ ಸಾವಿಗೆ ನ್ಯಾಯ ಒದಗಿಸುವಂತೆ ಕೋರಿ, ಸುಪ್ರೀಂ ಕದ ತಟ್ಟುವುದಾಗಿ ಡಾ.ಎಚ್.ಎಸ್. ಪ್ರಯಾಗ್ ಹೇಳಿದ್ದಾರೆ.

ಅದೇನೇ ಇರಲಿ. ಅರಣ್ಯ ಒತ್ತುವರಿಯಂತಹ ಗಂಭೀರ ಪ್ರಕರಣಗಳ ದಾವೆಗಳು ದಿನಂ ಪ್ರತಿ ಕೋರ್ಟ್ ನಲ್ಲಿ ದಾಖಲಾಗುತ್ತಿದ್ದು, ಕೋರ್ಟ್‌ಗಳಿಗೂ ಸಹ ಒತ್ತುವರಿಯಾಗಿ ಪರಿಣಮಿಸಿದೆ. ಇದನ್ನು ತಡೆಗಟ್ಟಲು ಅವನಿ ಪ್ರಜಾಪ್ರಭುತ್ವದ ಮೂರು ಅಂಗಗಳಿಗೆ ಒಂದು ಸುವರ್ಣಾವಕಾಶ ನೀಡಿದ್ದಳು. ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಪ್ರಜೆಗಳು ಆಕೆಯ ಪ್ರಾಣವನ್ನೇ ತೆಗೆದರು. ಒಂದು ಹುಲಿ ನಿಮ್ಮ ಪ್ರದೇಶದಲ್ಲಿ ಇದೆ ಎಂದಾದರೆ ಹುಲಿ ಭಯದಿಂದ ಅರಣ್ಯ ಒತ್ತುವರಿ ತಡೆಗಟ್ಟುತ್ತದೆ ಎಂಬುದು ಕಟು ಸತ್ಯ.

ಅವನಿ ನರಭಕ್ಷಕ ಹುಲಿ ಎಂಬುದನ್ನು ಮುಂದಿಟ್ಟುಕೊಂಡು ಅವನಿಯನ್ನ ಸೆರೆ ಹಿಡಿಯುವುದರ ಜತೆಗೆ, ನರಬಲಿಯನ್ನು ತಡೆಯಲು ಅರಣ್ಯ ಭೂಮಿ ಒತ್ತುವರಿ ಸಹ ತೆರವುಗೊಳಿಸುವಂತೆ ಸರಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬಹುದಿತ್ತು. ಮಾತ್ರವಲ್ಲದೆ, ಸದ್ಯ ಅವನಿ ಸಾವಿನ ಸುತ್ತ ಎದ್ದಿರುವ ಅನುಮಾನ ತಡೆಗಟ್ಟುವ ನಿಟ್ಟಿನಲ್ಲಿ ಈ operation ನ್ನು ವಿಡಿಯೋ ಚಿತ್ರೀಕರಣ ನಡೆಸುವಂತೆ ಆದೇಶದಲ್ಲಿ ಸೂಚನೆ ನೀಡಿದ್ದರೆ ಮತ್ತಷ್ಟು ಕೋರ್ಟ್ ಸಮಯ ಹಾಳಾಗುವುದನ್ನು ತಡೆಯಬಹುದಿತ್ತು. ಅದೇನೇ ಇರಲಿ ತಪ್ಪು ಯಾರದ್ದೆಂದು ತಿಳಿಯುವ ಮುನ್ನ ಒಂದು ಹುಲಿ ಜೀವ ಕಳೆದುಕೊಂಡಿದೆ. ಮತ್ತಷ್ಟು ಹುಲಿಗಳ ಮಾರಣ ಹೋಮ ನಡೆಯದಂತೆ

ಎಚ್ಚರವಹಿಸುವುದು ನಮ್ಮೆಲ್ಲರ ಕರ್ತವ್ಯ. ಎಷ್ಟಾದದರೂ ಅದು ನಮ್ಮ ರಾಷ್ಟ್ರೀಯ ಪ್ರಾಣಿ ಅಲ್ಲವೇ?

# ಟಿಪ್ಪು ಜಯಂತಿ ಸರಕಾರ ಏಕೆ ಆಚರಿಸಬೇಕು?

**ಚರ್ಚೆ**



**ಕೆ.ಎಂ. ಶಿವಪ್ರಸಾದ್**

editoped@vishwavani.news

ರಾಜ್ಯದಲ್ಲಿ ಎರಡ್ಮೂರು ವರ್ಷಗಳಿಂದ ಟಿಪ್ಪು ಜಯಂತಿ ಆಚರಣೆ ವಿರೋಧಿಸಿ ಕಿಚ್ಚು ಹೊತ್ತಿಕೊಂಡಿದೆ ಅನ್ನುವುದಕ್ಕಿಂತ ಹೊತ್ತಿಸುತ್ತಿದ್ದಾರೆ ಅನ್ನುವುದೇ ಸೂಕ್ತವಾದರೂ, ಅವರು ಬೆಂಕಿ ಹಚ್ಚಲು ಕಾರಣವಾಗುತ್ತಿರುವುದು ರಾಜ್ಯ ಸರಕಾರಗಳ ಮೊಂಡುತನದಿಂದಾಗಿಯೇ. ಟಿಪ್ಪು ಒಬ್ಬ ಮತಾಂಧ, ಕ್ರೂರಿ, ಕನ್ನಡ ವಿರೋಧಿ, ಹಿಂದೂ ವಿರೋಧಿ ಎಂಬ ಆರೋಪಗಳು ಬಿಜೆಪಿ ವಲಯದಿಂದ ಹಾಗೂ ಹಿಂದೂಪರ ಸಂಘಟನೆಗಳಿಂದ ಕೇಳಿ ಬರುತ್ತಿರುವ ಟೀಕೆಗಳಾದರೂ ಕೂಡ ಬಹುಸಂಖ್ಯಾತ ಹಿಂದೂಗಳಿಗೆ ಟಿಪ್ಪು ಜಯಂತಿಯ ಆಚರಣೆ ಸ್ವಲ್ಪವೂ ಇಷ್ಟವಿದ್ದಂತೆ ಕಾಣುತ್ತಿಲ್ಲ. ಟಿಪ್ಪು ಮೈಸೂರು ಹುಲಿ, ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಸೇನಾನಿ ಹಾಗೆ ಹೀಗೆ ಎಂದು ಎಷ್ಟೇ ಗುಣಗಾನ ಮಾಡಿ ಮೆಚ್ಚಿಸಲು ಹೊರಟರೂ, ಜನರಿಗೇಕೋ ಸರಕಾರಗಳ ಮತ್ತು ಜಾತ್ಯತೀತವಾದಿಗಳ ಈ ಗುಣಗಾನ ರುಚಿಸುತ್ತಿಲ್ಲ. ಸಾರ್ವಜನಿಕರಿಗೆ ಬೇಡವಾದ ಈ ಜಯಂತಿಯ ಆಚರಣೆಯಿಂದ ಯಾರಿಗೆ ಲಾಭವಾಗುತ್ತಿದೆ ಎನ್ನುವುದೇ ಪ್ರಶ್ನೆ. ಒಂದು ಕಡೆ ಮುಸ್ಲಿಂ ವೋಟ್ ಬ್ಯಾಂಕ್ ತಮ್ಮ ಪಕ್ಷದೆಡೆಗೆ ವಾಲುತ್ತಿದೆ ಎಂದೆನಿಸಿದರೂ ಕೂಡ ಮತ್ತೊಂದು ಕಡೆ ಒಂದು ಜನವರ್ಗವೇ ಈ ಆಚರಣೆಯಿಂದ ಮುನಿಸಿಕೊಂಡು ಬೇರೆಡೆಗೆ ವಾಲುತ್ತಿದೆ ಎಂಬುದನ್ನು ಅಧಿಕಾರದಲ್ಲಿರುವವರು ಅರಿಯಲು ಸಾಧ್ಯವಾಗದಿರುವುದು ವಿಪರ್ಯಾಸ.

ಯಾವುದೋ ಒಂದು ಜಯಂತಿಯ ಆಚರಣೆಯಿಂದ ಒಂದು ಸಮುದಾಯದ ಮತಗಳೆಲ್ಲ ತಮ್ಮ ಪಕ್ಷಕ್ಕೆ ಹರಿದು ಬರುತ್ತದೆ ಅನ್ನುವುದಾದರೆ, ಅಭಿವೃದ್ಧಿ ಯೋಜನೆಗಳೇಕೆ ಬೇಕು? ಆಯಾ ಸಮುದಾಯದ ಮಹಾನ್ ವ್ಯಕ್ತಿಗಳ ಆಚರಣೆಗಳನ್ನೆಲ್ಲ ವರ್ಷವಿಡೀ ಮಾಡಿಕೊಂಡು ಕಾಲ ಕಳೆದರಾಯಿತಲ್ಲವೇ? ಆಗ ಇಷ್ಟೊಂದು ಕೋಟ್ಯಂತರ ರುಪಾಯಿ ಖರ್ಚು ಮಾಡುವ ಅಗತ್ಯವೇ ಇರುವುದಿಲ್ಲ. ದೇಶ ಅಭಿವೃದ್ಧಿಯ ನಾಗಾಲೋಟದಲ್ಲಿ ಸಾಗುತ್ತಿರುವ ಈ ಸಂದರ್ಭದಲ್ಲಿ ಜಾತಿಗೊಂದು ಜಯಂತಿ ಆಚರಣೆ ಮಾಡಿಕೊಂಡು ಜನರ ಭಾವನೆಗಳ ನಡುವೆ ಬೆಂಕಿ ಹಚ್ಚಿ ಇಷ್ಟೊಂದು ದುಂದುವೆಚ್ಚ ಮಾಡುತ್ತಿರುವುದಾದರೂ ಏಕೆ? ಜನಸಾಮಾನ್ಯರ ನಡುವಿನ ಸಾಮರಸ್ಯವನ್ನು ಹಾಳು ಮಾಡುವ ಈ ಜಯಂತಿಗಳಿಂದ ಎಷ್ಟು ಬಡಜನರ ಹೊಟ್ಟೆ ತುಂಬುತ್ತಿದೆ? ಪ್ರತಿಯೊಬ್ಬ ಮಹನೀಯರ ಜಯಂತಿಗಳಲ್ಲಿ ಆಯಾ ಜಾತಿಯ ಒಂದಷ್ಟು ಸಂಘಟನೆಗಳಿಗೆ ಒಂದಷ್ಟು ಗಳಿಕೆ ದೊರೆತರೆ, ಈ ಸಮಾರಂಭಗಳ ವೇದಿಕೆಗಳಲ್ಲಿ ನಿಂತು ಇತರ ಜಾತಿಯ ಜನರು ಮತ್ತು ನಾಯಕರ ಮೇಲೆ ದ್ವೇಷದ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಲು ಕೆಲವೊಂದು ಕುತಂತ್ರಿಗಳಿಗೆ ಸರಕಾರಗಳೇ ಕೋಟ್ಯಂತರ ಹಣ ಖರ್ಚು ಮಾಡಿ ವೇದಿಕೆ ಒದಗಿಸಿಕೊಡುತ್ತಿರುವುದು ನಾಚಿಕೆಗೇಡು.

ಕಳೆದ ಬಾರಿ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಸರಕಾರ ಟಿಪ್ಪು ಜಯಂತಿಯ ಆಚರಣೆಗೆ ಕೈಹಾಕಿ ಕೈಸುಟ್ಟುಕೊಂಡಿದೆ. ಸಿದ್ದರಾಮಯ್ಯನವರ ಜನಪ್ರಿಯ ಯೋಜನೆಗಳು, ಭ್ರಷ್ಟಾಚಾರ ರಹಿತ ಆಡಳಿತದ ನಡುವೆಯೂ ಬಿಜೆಪಿಯ ನಾಯಕರು ಹಚ್ಚಿದ ಕೋಮು ಬೆಂಕಿಗೆ ಇಡೀ ರಾಜ್ಯದ ಜನರೇ ಮಾನಸಿಕವಾಗಿ ಬೆಂದು ಹೋಗಿದ್ದಾರೆ. ಮಾತೆತ್ತಿದರೆ ಟಿಪ್ಪು ಹಿಂದೂ ವಿರೋಧಿ, ಕನ್ನಡ ದ್ರೋಹಿ ಅದಕ್ಕಾಗಿ ಇಂತಹ ನೀಚ ವ್ಯಕ್ತಿಯ ಜಯಂತಿಯನ್ನು ಆಚರಣೆ ಮಾಡಕೂಡದೆಂದು ಬೊಂಬಡ ಬಾರಿಸುವ ಈ ನಾಯಕರು ವಾಲ್ಮೀಕಿ ಜಯಂತಿ, ಅಂಬೇಡ್ಕರ್ ಜಯಂತಿ, ಕೆಂಪೇಗೌಡ ಜಯಂತಿಯನ್ನು ಅದೆಷ್ಟು ವೈಭವಯುತವಾಗಿ ಆಚರಿಸಿದ್ದಾರೆ ಎಂಬುದು ಅವರಿಗೇ ಗೊತ್ತು. ಕೇವಲ ಬಹುಸಂಖ್ಯಾತ ಹಿಂದೂಗಳ ಮತವನ್ನು ತನ್ನೆಡೆ ಸೆಳೆಯಲು, ಮುಸ್ಲಿಂರ ವಿರೋಧಿಯಾಗಿ ಹಿಂದೂಗಳ ಹಿತಕಾಯಲು ಉದ್ಭವವಾಗಿರುವ ಮಹಾನ್ ತಾವು ಎಂದು ಜನರ ಕಣ್ಣಿಗೆ ಮಣ್ಣೆರಚುತ್ತಿದ್ದಾರೆಯೇ ಹೊರತು ಇದುವರೆಗೂ ಹಿಂದೂಗಳ ಹಿತಕಾಯುವ ಕನಿಷ್ಠ ಮಟ್ಟದ ಕೆಲಸವನ್ನು ಈ ನಾಯಕರು ಮಾಡಿಲ್ಲ ಅನ್ನುವುದೇ ಸತ್ಯ. ಹೀಗೆ ಹಳೇ ಸರಕಾರವೂ ಕೂಡ ಅವರ ಕಿತಾಪತಿಯ ಅರಿಯದೇ ಅವರು ಆಡಿದ ಮಂಗಾಟಗಳು ಮತ್ತು ಕುತಂತ್ರಗಳಿಗೆ ತಾವೇ ಕೊರಳೊಡ್ಡಿ ಅದರ ಪಾಪ ಫಲವನ್ನು ಇಂದು ಅನುಭವಿಸುತ್ತಿದ್ದಾರೆ. ಹೀಗಿರುವಾಗ ನೂತನ ಸಮ್ಮಿಶ್ರ ಸರಕಾರವೂ ಕೂಡ ಈ ಟಿಪ್ಪು ಜಯಂತಿಯನ್ನು ಆಚರಿಸಲು ಮುಂದಾಗಿರುವುದು ಇದುವರೆಗೂ ರಾಜ್ಯದ ಜನರ ನಡುವೆ ಬೆಂಕಿ ಹಚ್ಚಲು ಯಾವ ವಿಷಯವೂ ಇಲ್ಲದೇ ಕೈಕಟ್ಟಿ ಕುಳಿತಿದ್ದ ಬಿಜೆಪಿಗರಿಗೆ ಮತ್ತೊಂದು ಅಸ್ತ್ರವನ್ನು ತಾವೇ ಕೊಟ್ಟಂತಾಗಿದೆ.

ಹೌದು. ಸಿದ್ದರಾಮಯ್ಯ ನೇತೃತ್ವ ಸರಕಾರ ಇದ್ದ ಅಷ್ಟು ದಿವಸ ಕೇವಲ ಕೋಮುಭಾವನೆಗಳ ಪ್ರಚೋದಿಸುವ ಮಾತನಾಡುತ್ತಾ, ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ ಕರಾವಳಿಯಲ್ಲಿ ಆದ ಹತ್ಯೆಗಳಿಗೆಲ್ಲ ಕೇಸರಿ ಶಾಲು ಹೊದಿಸಿಕೊಂಡು ಬೀದಿ–ಬೀದಿಯಲ್ಲಿ ಕೀಳು ಪದ ಪ್ರಯೋಗಿಸಿ ನಿಂದಿಸಿದ ರಾಜ್ಯ ಬಿಜೆಪಿಯ ನಾಯಕರು ನಂತರ ದಿನಗಳಲ್ಲಿ ಆ ಹತ್ಯೆಗಳಿಗೆ ಕಾರಣರಾದವರಿಗೆ ಶಿಕ್ಷೆ ಕೊಡಿಸಲು ಅದೆಷ್ಟು ಹೋರಾಟ ಮಾಡಿದ್ದಾರೆ? ಅಂದು ಬೀದಿ–ಬೀದಿಯಲ್ಲಿ ಆದ ಹತ್ಯೆಗಳ ತನಿಖೆಯನ್ನು ಕೇಂದ್ರದ ತನಿಖಾ ಸಂಸ್ಥೆಗೆ ವಹಿಸಬೇಕೆಂದು ಹಠ ಹಿಡಿದು ಕುಳಿತಿದ್ದವರು ಚುನಾವಣೆ ಮುಗಿಯುತ್ತಿದ್ದಂತೆ ಅಧಿಕಾರದ ಕುರ್ಚಿ ಹಿಡಿಯಲು ಇನ್ನಿಲ್ಲದ ಕಸರತ್ತು ನಡೆಸುವುದರಲ್ಲಿ ಮಗ್ನರಾದರು.

ಹೊರತು ಕರಾವಳಿಯಲ್ಲಿ ಹತ್ಯೆಯಾದವರ ಆತ್ಮಕ್ಕೆ ಶಾಂತಿ ದೊರಕಿಸಿಕೊಡುವ, ಹತ್ಯೆ ಮಾಡಿದ ಹಂತಕರಿಗೆ ಕಠಿಣ ಶಿಕ್ಷೆ ಕೊಡಿಸುವ ಪ್ರತಿಜ್ಞೆ ಮರೆತೇ ಹೋಯಿತು. ಅಂತಹ ಒಂದೇ–ಒಂದು ಪ್ರಯತ್ನ ಕೂಡ ಬಿಜೆಪಿ ನಾಯಕರಿಂದ ಆಗಿಲ್ಲ. ಪರಿಸ್ಥಿತಿ ಹೀಗಿರುವಾಗ, ವಿವಾದದಿಂದ ದೂರವುಳಿದು ಅಂತರ ಕಾಯ್ದುಕೊಳ್ಳದೇ ಹಾಲಿ ಮುಖ್ಯಮಂತ್ರಿಯೂ ಎಡವುತ್ತಿರುವುದು ಅಪೇಕ್ಷಣೀಯವಲ್ಲ. ಈ ಹಿಂದೆ ತನ್ನ ಸರಕಾರ ಯಾವುದೇ ಮತೀಯ ಭಾವನೆ ಕೆರಳಿಸುವ ಕೆಲಸ ಮಾಡುವುದಿಲ್ಲ. ಅಂತಹ ಕೆಲಸಗಳಿಗೆ ಯತ್ನಿಸುವವರಿಗೆ ಅವಕಾಶ ನೀಡುವುದಿಲ್ಲ ಎನ್ನುತ್ತಿದ್ದ ಕುಮಾರಸ್ವಾಮಿ ಮತ್ತೆ ಟಿಪ್ಪು ಜಯಂತಿಯ ಆಚರಣೆಗೆ ಅಸ್ತು ಎಂದಿರುವುದು ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ದೊಡ್ಡಮಟ್ಟದ ಎಡವಟ್ಟು ಸೃಷ್ಟಿಸಲಿದ್ದು ಬಹುಸಂಖ್ಯಾತ ಹಿಂದೂಗಳ ಮತ ಕ್ರೋಡೀಕರಣಕ್ಕೆ ಬೀಸಿದ ಬಲೆಯಾಗಿದೆ ಅಷ್ಟೇ.

ಕುಮಾರಣ್ಣನ ಮುಂದಿದೆ ಕೇವಲ ಅದೊಂದು ದಾರಿ...ಯಾರು ಏನೇ ತಡಬಡಾಯಿಸಿದರೂ ಎಷ್ಟೇ ಜಾತ್ಯತೀತವಾದಿಗಳೆಂದು ಪೋಸುಕೊಟ್ಟರು ಕೂಡ ಒಂದಲ್ಲ ಒಂದು ಬಗೆಯಲ್ಲಿ ಪ್ರತಿಯೊಬ್ಬರೂ ಒಂದೊಂದು ಜಾತಿಯನ್ನು ಓಲೈಸಲು ಪ್ರಯತ್ನಿಸುವುದು ಎದ್ದು ಕಾಣುತ್ತಿದೆ. ಈ ಮಧ್ಯೆ ಈಗ ಆಚರಿಸುತ್ತಿರುವ ಜಯಂತಿಗಳ ಆಚರಣೆಯನ್ನು ರದ್ದುಪಡಿಸುವುದು ಟಿಪ್ಪು ಜಯಂತಿ ವಿವಾದದ ಮಧ್ಯೆ ಮತ್ತೊಂದು ತರಹದ ವಿವಾದಗಳಿಗೆ ಎಡೆಮಾಡಿಕೊಡಲು ಸಾಧ್ಯ. ಆದ್ದರಿಂದ ಎಲ್ಲಾ ಜಯಂತಿಗಳ ಆಚರಣೆಯನ್ನು ಆಯಾ ವರ್ಷದ ಒಂದು ದಿನದಲ್ಲಿ ಸರಕಾರಿ ರಜೆ ಸಹಿತ ನಾಡ ಉತ್ಸವವನ್ನಾಗಿ ಆಚರಿಸುವ ನಿರ್ಧಾರವನ್ನು ಪ್ರಕಟಿಸಿ ಮಹಾನ್ ವ್ಯಕ್ತಿಗಳಿಗೆ ಅಂಟಿರುವ ಜಾತಿ–ಧರ್ಮದ ಹಣೆಪಟ್ಟಿಯನ್ನು ಕಳಚುವಂತೆ ಮುಖ್ಯಮಂತ್ರಿಗಳು ಮಾಡಬಹುದು. ಈ ಮೂಲಕ ತಮ್ಮ ವಿಶೇಷತೆ ಮೆರೆಯಬಹುದು. ಅದು ಬಿಟ್ಟು ಕಾಂಗ್ರೆಸ್‌ನೊಂದಿಗೆ ಸರಕಾರ ರಚಿಸಿರುವ ಕಾರಣಕ್ಕೆ ಟಿಪ್ಪು ಜಯಂತಿಯ ಆಚರಣೆಗೆ ಮುಂದಾಗಿ ಎರಡು ರಾಷ್ಟ್ರೀಯ ಪಕ್ಷಗಳ ಇಕ್ಕಳದಲ್ಲಿ ಸಿಲುಕಿದ ಇಲಿಯಂತಾಗುವುದು ಕೂಡದು. ಏಕೆಂದರೆ ಒಂದು ಪ್ರಾದೇಶಿಕ ಪಕ್ಷಕ್ಕೆ ಕಳಂಕ ಅಂಟಿಕೊಂಡರೆ ಅದರಿಂದ ಹೊರಬರುವುದು ಅಷ್ಟೊಂದು ಸುಲಭವಲ್ಲ. ಆದರೆ ರಾಷ್ಟ್ರೀಯ ಪಕ್ಷಗಳಿಗೆ ಅದು ಅಷ್ಟೊಂದು ಕಷ್ಟದ ಕೆಲಸವಲ್ಲ ಅನ್ನುವುದನ್ನು ಸಿಎಂ ಅರಿಯಬೇಕು. ಸರಕಾರ ಟಿಪ್ಪು ಜಯಂತಿಯ ಆಚರಣೆಯಿಂದ ಹೊರಬರುವುದು ಒಟ್ಟಿನಲ್ಲಿ ಮುಖ್ಯ. ಯಾವುದೇ ಮತೀಯ, ಜಾತಿಯ ಕಲಹದೊಳಗೆ ತಲೆಹಾಕದೇ ಇರುವುದು ಒಂದು ವರ್ಗದಲ್ಲಿ ಒಳ್ಳೆಯ ಅಭಿಪ್ರಾಯ ರೂಪಿಸಬಹುದು. ಕುಮಾರಸ್ವಾಮಿ, ಜನರ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಉತ್ತಮ ನಾಯಕರಾಗುತ್ತಾರೋ ಅಥವಾ ತಪ್ಪು ಹಾದಿ ತುಳಿದು ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕುತ್ತಾರೋ ಎಂಬುದು ಅವರ ಕೈಯಲ್ಲೇ ಇದೆ.

ಸರಕಾರ ಆಚರಣೆಗೆ ಮನಸ್ಸು ಮಾಡಿದ ಕೂಡಲೇ ಮಗದೊಂದು ಬಾರಿ ಟಿಪ್ಪು ಪರ–ವಿರೋಧಿ ಅಭಿಪ್ರಾಯಗಳು ಯಾವುದೇ ತಳಹದಿಯಿಲ್ಲದೆ ಮತ್ತೆ ಯದ್ವಾತದ್ವಾ ಹರಿದಾಡುತ್ತಿವೆ. ಟಿಪ್ಪು ಸುಲ್ತಾನ್ ವೀರಾಧಿವೀರನೋ ಅಥವಾ ಹಿಂದೂ ವಿರೋಧಿಯೋ, ಕನ್ನಡ ದ್ರೋಹಿಯೋ ಅಥವಾ ಈ ಹಿಂದೆ ಟಿಪ್ಪುವಿನ ಬಗೆಯಿದ್ದ ಇತಿಹಾಸಗಳೆಲ್ಲ ಸುಳ್ಳೇ, ಸುಳ್ಳು ಅನ್ನುವುದಾದರೆ ಸತ್ಯ ಯಾವುದು ಮುಂತಾದವೆಲ್ಲ ಬಿಡಿಸಲಾರದಷ್ಟು ಸಿಕ್ಕಾಗಿವೆ. ಇತಿಹಾಸಕಾರರು ಬರೆದಿಟ್ಟಿರುವ ಯಾವ ಇತಿಹಾಸದಲ್ಲಿ ಲೋಪವಿದೆ ಅನ್ನುವ ಸತ್ಯ ಅರಿಯಲು ಒಂದು ಸಮಿತಿಯನ್ನು ರಚಿಸುವಂತೆ ಸ್ವತಃ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಕರ್ನಾಟಕ ಸಲ್ಲಿಸಬಹುದಲ್ಲ?. ಅಲ್ಲಿಯವರೆಗೂ ಟಿಪ್ಪು ಜಯಂತಿಯ ಆಚರಣೆಯನ್ನು ಸರಕಾರದ ಆಚರಣೆಯ ಬದಲಾಗಿ ಖಾಸಗಿ ಕಾರ್ಯಕ್ರಮದಂತೆ ಆಚರಿಸಿಕೊಳ್ಳಲು ಅನುಮತಿ ನೀಡಿದರೆ ವಿಹಿತ. ಹಾಗಲ್ಲದಿದ್ದರೆ, ಟಿಪ್ಪು ಜಯಂತಿ ಆಚರಣೆಗೆ ನೀಡುವ ಅನುಮತಿಯನ್ನು ಹನುಮ ಜಯಂತಿಯ ಆಚರಣೆಗೂ ನೀಡಿ, ಬಹುಸಂಖ್ಯಾತ ಹಿಂದೂಗಳ ಗಣೇಶ ಹಬ್ಬಕ್ಕೆ, ಹನುಮ ಜಯಂತಿಗೆ ಇನ್ನಿಲ್ಲದ ಷರತ್ತುಗಳನ್ನು ವಿಧಿಸಬೇಡಿ, ಅಲ್ಪಸಂಖ್ಯಾತರ ಓಲೈಕೆಗೆ ಬೇಡದ ಗೋಜಲು ಸೃಷ್ಟಿಸಬೇಡಿ ಎಂಬ ಬೇಡಿಕೆಗಳು ಮತ್ತೆ ಮೊಳಗುತ್ತವೆ. ಇದಕ್ಕೆ ಕೊನೆ ಎಂಬುದೇನಾದರೂ ಇದೆಯೇ?

# ನಾವು ಬಡವರಾಗಿಯೇ ಇರುವುದಿಲ್ಲಮ್ಮಾ! ಸಿರಿವಂತರಾಗುತ್ತೇವೆ!

**ಕ್ಷಣ ಹೊತ್ತು ಆಣಿ ಮುತ್ತು**



**ಎಸ್.ಷಡಕ್ಷರಿ**

editoped@vishwavani.news

ಹೌದು. ಬಾರ್ ಒಂದರಲ್ಲಿ ಕುಡಿಯುತ್ತಾ ಕುಳಿತಿದ್ದ ಒಬ್ಬ ಕುಡುಕರು ಪಾಶ್ಚಾತ್ಯ ಸಂಗೀತದ ಜಗತ್ತಿಗೆ ಒಬ್ಬ ಹಾಡುಗಾರನನ್ನು ಹುಡುಕಿಕೊಟ್ಟರು! ಆ ಕುತೂಹಲಕಾರೀ ಘಟನೆ ಹೀಗಿದೆ:

ಕಳೆದ ಶತಮಾನದ ಆರಂಭ ಕಾಲದಲ್ಲಿ ಅಮೆರಿಕಾದ ಶಿಕಾಗೋ ನಗರದಲ್ಲಿ ಕೋಲ್ ಹೆಸರಿನ ಬಡ ಕುಟುಂಬವೊಂದಿತ್ತು. ಆ ಕುಟುಂಬದ ಎರಡನೆಯ ಮಗ ನ್ಯಾಟ್ ಚಿಕ್ಕಂದಿನಿಂದಲೇ ತನ್ನ ತಾಯಿಯಿಂದ ಪಿಯಾನೋ ನುಡಿಸುವುದನ್ನು ಕಲಿತ. ಆತನಿಗೆ ಏನೇನೋ ಆಟಿಕೆಗಳನ್ನು ಕೊಂಡುಕೊಳ್ಳಬೇಕೆಂಬ ಆಸೆ. ಆದರೆ ಆತನ ತಾಯಿ ತಂದೆ ಕಡುಬಡವರು. ಒಮ್ಮೆ ಆತ ಚಿಕ್ಕ ಹುಡುಗನಿದ್ದಾಗ ತಾಯಿಯನ್ನು ಏನೋ ಬೇಕೆಂದು ಕೇಳಿದ. ಆಕೆ 'ನಾವು ಬಡವರು. ಅದನ್ನು ಪಡೆಯಲು ಸಾಧ್ಯವಿಲ್ಲ' ಎಂದರು. ಆತ ಮತ್ತೆ ಮತ್ತೆ ಏನಾದರೂ ಕೇಳಿದಾಗಲೂ ಆಕೆ 'ನಾವು ಬಡವರು. ಅಷ್ಟೆಲ್ಲಾ ಖರ್ಚು ಮಾಡಿ ಅವನ್ನು ಕೊಳ್ಳಲು ಸಾಧ್ಯವಿಲ್ಲ' ಎನ್ನುತ್ತಿದ್ದರು. ಬಾಲಕ ನ್ಯಾಟ್ ಸ್ವಲ್ಪ ಯೋಚಿಸುತ್ತಿದ್ದ. ಆನಂತರ 'ಚಿಂತಿಸಬೇಡಮ್ಮ, ನಾವು ಬಡವರಾಗಿಯೇ ಇರುವುದಿಲ್ಲ, ನಾವೂ ಸಿರಿವಂತರಾಗುತ್ತೇವೆ!' ಎಂದು ಭರವಸೆ ನೀಡುತ್ತಿದ್ದ.

ಆತ ತನ್ನ ತಾಯಿಯಿಂದ ಪಿಯಾನೋ ನುಡಿಸುವುದನ್ನು ಚೆನ್ನಾಗಿ ಕಲಿತ. ತನ್ನ ಹನ್ನೊಂದನೆಯ ವಯಸ್ಸಿಗೆ ಬಾರುಗಳಲ್ಲಿ ಪಿಯಾನೊ ನುಡಿಸುತ್ತ ಸಂಪಾದನೆ ಮಾಡತೊಡಗಿದ. ಆತನಿಗೆ ಒಳ್ಳೆ ಬೇಡಿಕೆಯಿತ್ತು. ಒಬ್ಬ ಬಾರಿನ ಮಾಲೀಕ ಆತನನ್ನು 'ಪಿಯಾನೋ ಕಿಂಗ್' ಎಂದು ಕರೆದ. ಆತನ ಹೆಸರು 'ನ್ಯಾಟ್ ಕಿಂಗ್ ಕೋಲ್' ಎಂದಾಯಿತು. ಆತನ ಬದುಕನ್ನೇ ಬದಲಿಸುವ ಆ ಘಟನೆ ಆತನ ಹದಿನಾರನೆಯ ವಯಸ್ಸಿನಲ್ಲಿ ನಡೆಯಿತು. ಮಬ್ಬು ಬೆಳಕಿನ ಬಾರಿನಲ್ಲಿ ಆತ ಪಿಯಾನೋ ನುಡಿಸುತ್ತಿದ್ದ. ಸುತ್ತ ಜನ ಕುಡಿಯುತ್ತ ಕುಳಿತಿದ್ದರು.

ಇದ್ದಕ್ಕಿದ್ದಂತೆ ಚೆನ್ನಾಗಿ ಕುಡಿದಿದ್ದ ಒಬ್ಬ ಕುಡುಕ ಆತನ ಮುಂದೆ ತೂರಾಡುತ್ತ ಬಂದು ನಿಂತ. ಆತನಿಗೆ ಹಾಡುವಂತೆ ಆಜ್ಞಾಪಿಸಿದ. ನ್ಯಾಟ್ ಸಮಾಧಾನವಾಗಿ ತಾನು ಪಿಯಾನೋ ವಾದಕ, ಹಾಡುಗಾರನಲ್ಲವೆಂದು ಹೇಳಿದ. ಆದರೆ ಕುಡುಕ ಹಾಡಲೇಬೇಕೆಂದು ಒತ್ತಾಯಿಸಿದ. ಸಿಟ್ಟಿನಿಂದ ಕೂಗಾಡಿದ. ಬಾರಿನ ಮಾಲೀಕ ಬಂದು ಸಮಾಧಾನ ಪಡಿಸಿದರೂ ಕುಡುಕ ಕೇಳಲಿಲ್ಲ. ಗದ್ದಲವೆಬ್ಬಿಸಿದ. ಕೊನೆಗೆ ಬಾರಿನ ಮಾಲೀಕ ನ್ಯಾಟನನ್ನು ಒಂದು ಹಾಡು ಹೇಳಿಬಿಡು. ಸಮಸ್ಯೆ ನಿವಾರಣೆಯಾಗುತ್ತದೆ ಎಂದು ಹೇಳಿದಾಗ, ಬೇರೆ ದಾರಿಯಿರಲಿಲ್ಲ. ನ್ಯಾಟಿಗೆ 'ಸ್ವೀಟ್ಲೋರೈನ್' ಎಂಬ ಹಾಡಿನ ಪದಗಳು ಗೊತ್ತಿತ್ತು. ರಾಗವೂ ಗೊತ್ತಿತ್ತು. ಏಕೆಂದರೆ ಅದನ್ನು ಆತ ಪಿಯಾನೋದಲ್ಲಿ ನುಡಿಸಿದ್ದ. ಅದನ್ನೇ ಆತ ಹಾಡಿದ.

ಆತ ಎಷ್ಟು ಚೆನ್ನಾಗಿ ಹಾಡಿದನೆಂದರೆ ಅಲ್ಲಿದ್ದವರಿಗೆಲ್ಲ ಆಶ್ಚರ್ಯವಾಯಿತು. ಸ್ವತಃ ನ್ಯಾಟನಿಗೂ ಆಶ್ಚರ್ಯವಾಯಿತು. ಅಂದಿನಿಂದ ನ್ಯಾಟ್ ಹಾಡುಗಾರನಾಗಿಬಿಟ್ಟ. ಪಿಯಾನೋ ನುಡಿಸುವುದನ್ನು ಬಿಟ್ಟ. ದಿನೇ ದಿನೇ ಜನಪ್ರಿಯತೆಯ ಮೆಟ್ಟಿಲನ್ನು ಏರುತ್ತ ಹೋದ. ಆತನ ನೂರಾರು ಗ್ರಾಮಾಫೋನ್ ರೆಕಾರ್ಡುಗಳು ಹೊರಬಂದವು. ಲಕ್ಷಲಕ್ಷ ಸಂಖ್ಯೆಯಲ್ಲಿ ಮಾರಾಟವಾಗಹತ್ತಿದವು. ರೇಡಿಯೋ, ಟೆಲಿವಿಷನ್ನುಗಳಲ್ಲಿ ಆತ ಅತಿ ದೊಡ್ಡ ತಾರೆಯಾಗಿಬಿಟ್ಟ. ಕೋಟಿಗಟ್ಟಲೆ ಹಣ ಸಂಪಾದಿಸಿದ. ಅಮೆರಿಕಾದ ಅತಿ ಬೆಲೆಬಾಳುವ ಬಡಾವಣೆಯಲ್ಲಿ ದೊಡ್ಡ ಬಂಗಲೆ ಕೊಂಡುಕೊಂಡ. ಅಮೇರಿಕದ ಅಧ್ಯಕ್ಷ ಕೆನೆಡಿಯವರೂ ಆತನನ್ನು ಆಹ್ವಾನಿಸಿ ಸನ್ಮಾನಿಸುವಷ್ಟು ಎತ್ತರಕ್ಕೆ ಬೆಳೆದ. 1965ರಲ್ಲಿ ತನ್ನ ನಲವತ್ತೆಂಟನೆಯ ವಯಸ್ಸಿನಲ್ಲಿ ಗಂಟಲ ಕ್ಯಾನ್ಸರಿಗೆ ತುತ್ತಾಗಿ ಸಾವನ್ನಪ್ಪುವ ಹೊತ್ತಿಗೆ ಆತ ಅತ್ಯಂತ ಜನಪ್ರಿಯ ಗಾಯಕನಾಗಿದ್ದ.

ಒಬ್ಬ ಮಹಾನ್ ಗಾಯಕ ಸದಾ ಆತನ ಬಳಿಗೇ ಅಡಗಿ ಕುಳಿತಿದ್ದ. ಆದರೆ ಆತ ತನ್ನನ್ನು ಕೇವಲ ಪಿಯಾನೋ ವಾದಕನೆಂದು ಭಾವಿಸಿದ್ದ. ಆ ಕುಡುಕ ಬಾರದಿದ್ದರೆ ಆತ ಪಿಯಾನೋ ವಾದಕನಾಗಿ ಕಣ್ಮರೆಯಾಗುತ್ತಿದ್ದ!

ನಮ್ಮಲ್ಲಿ, ನಮ್ಮ ಸುತ್ತಮುತ್ತಲಿನವರಲ್ಲಿ ಯಾವ್ಯಾವ ಪ್ರತಿಭೆ ಅಡಗಿ ಕುಳಿತಿದೆಯೋ ಯಾರಿಗೆ ಗೊತ್ತು? ಪ್ರಯತ್ನಪಟ್ಟರೆ, ಅವಕಾಶ ಸಿಕ್ಕರೆ ನಾವೂ ಏನೆಲ್ಲ ಸಾಧನೆ ಮಾಡಬಹುದೋ ಯಾರಿಗೆ ಗೊತ್ತು? ಯೋಚಿಸಿ ನೋಡಿ!